## ಜಾಗತಿಕ ರಂಗದಲ್ಲಿ..

ಅಂತರರಾಷ್ಟ್ರೀಯ ಮಟ್ಟದಲ್ಲಿ 2016 ಹಲವು ರಕ್ತಸಿಕ್ತ ಹೆಜ್ಜೆ ಗುರುತುಗಳನ್ನು ಮೂಡಿಸಿದೆ. ಜಗತ್ತನ್ನೇ ನಡುಗಿಸಿದ ಹಲವು ಭಯೋತ್ಪಾದಕ ಕೃತ್ಯಗಳು ನಡೆದಿವೆ. ಅಮೆರಿಕದ ಒರ್ಲಾಂಡೋದಲ್ಲಿ ನೈಟ್ ಕ್ಲಬ್ ಮೇಲೆ ದಾಳಿ ನಡೆಸಿದ ಬಂದೂಕುಧಾರಿ 49 ಮಂದಿಯನ್ನು ಕೊಂದು ಹಾಕಿದ್ದು ಬರ್ಬರ ಘಟನೆ. ಬ್ರುಸೆಲ್ಸ್‌ನಲ್ಲಿ ಉಗ್ರಗಾಮಿಗಳು ದಾಳಿ ನಡೆಸಿ 32 ಮಂದಿಯನ್ನು ಕೊಂದು ಹಾಕಿದರು. ಫ್ರಾನ್ಸಿನ ನೈಸ್ ಎಂಬಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 86 ಜನರು ಸಾವಿಗೀಡಾದರು. ಪಾಕಿಸ್ತಾನದಲ್ಲಿ ನಡೆದ ಉಗ್ರಗಾಮಿಗಳ ದಾಳಿಯಲ್ಲಿ 75 ಜನರು ಸತ್ತರು. ಜಗತ್ತಿನಾದ್ಯಂತ ಈ ವರ್ಷ ಇಂತಹ ಸುಮಾರು 100ರಷ್ಟು ಉಗ್ರಗಾಮಿ ದಾಳಿಗಳು ನಡೆದಿವೆ.

ಸಿರಿಯಾದ ಅಲೆಪ್ಪೋದಲ್ಲಿ ನಡೆದ ಆಳುವವರು ಮತ್ತು ಐಸಿಸ್ ಬಂಡುಕೋರರ ನಡುವಣ ಯುದ್ಧ ಲಕ್ಷಾಂತರ ಜನರನ್ನು ಬೀದಿಗೆ ತಂದಿದೆ. ಸುಮಾರು 3.20 ಲಕ್ಷ ಜನರು ನಿಲ್ಲಲೂ ನೆಲೆಯಿಲ್ಲದೆ ನಿರಾಶ್ರಿತರಾಗಿ ದೇಶಾಂತರ ಹೋಗಿದ್ದಾರೆ.

ಜನಮತಗಣನೆಯೊಂದು ದೇಶದ ಪ್ರಧಾನಿಯ ರಾಜೀನಾಮೆಗೇ ಕಾರಣವಾದದ್ದು ಇಂಗ್ಲೆಂಡಿನಲ್ಲಿ. ಯೂರೋಪಿಯನ್ ಒಕ್ಕೂಟದಿಂದ ಬ್ರಿಟನ್ ಹೊರಕ್ಕೆ ಬರಲು ಕಾರಣವಾದ ಜನಮತಗಣನೆಗೆ ತಲೆಬಾಗಿ ಪ್ರಧಾನಿ ಡೇವಿಡ್ ಕ್ಯಾಮರೂನ್ ರಾಜೀನಾಮೆ ನೀಡಿದರು. ಥೆರೆಸಾ ಮೇ ಹೊಸ ಪ್ರಧಾನಿಯಾದರು.

ಅಮೆರಿಕದಲ್ಲಿ ಹೊಸ ರಾಷ್ಟ್ರಾಧ್ಯಕ್ಷರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ರಿಪಬ್ಲಿಕನ್ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ವಿಜೇತರಾದದ್ದು ಇಡೀ ವಿಶ್ವವನ್ನೇ ಬೆರಗುಗೊಳಿಸಿದ ಸುದ್ದಿ. ರಾಜಕೀಯದಲ್ಲಿ ಅಪಾರ ಅನುಭವ ಇರುವ ಹಿಲರಿ ಕ್ಲಿಂಟನ್ ಅವರನ್ನು ರಾಜಕಾರಣಿಯೇ ಅಲ್ಲದ ಟ್ರಂಪ್ ಸೋಲಿಸಿದ್ದು ವರ್ಷದ ಅತಿದೊಡ್ಡ ಸುದ್ದಿ.




ಗಾಲ್ಫ್‌ನಲ್ಲಿ ಸಾಧನೆ.. ಅದಿತಿ ಅಶೋಕ್



ಸಾಕ್ಷಿ ಮಲಿಕ್.. ಒಲಿಂಪಿಕ್‌ನಲ್ಲಿ ಕಂಚು



ಪಿ.ವಿ.ಸಿಂಧು.. ಒಲಿಂಪಿಕ್‌ನಲ್ಲಿ ಬೆಳ್ಳಿ ಸಾಧನೆ

ಕಡಿಮೆಯಾದರೆ ಮೊದಲು ಏಟು ಬೀಳುವುದೇ ರಿಯಲ್ ಎಸ್ಟೇಟ್ ಉದ್ಯಮಕ್ಕೆ. ವರ್ಷದ ಕೊನೆಯಲ್ಲಿ ರಿಯಲ್ ಎಸ್ಟೇಟ್ ಉದ್ಯಮದಿಂದ ಸುಮಾರು 8 ಲಕ್ಷ ಕೋಟಿ ರೂಪಾಯಿಗಳು ಮಾಯವಾಗಿವೆ ಎಂದು ಅಂದಾಜಿಸಲಾಗಿದೆ.

ಸರ್ಕಾರ ಈ ವಿದ್ಯಮಾನವನ್ನು ಗ್ರಹಿಸುವ ಕ್ರಮವೇ ಬೇರೆ. 'ನಮ್ಮ ಆರ್ಥಿಕತೆಯಲ್ಲಿ ಕಪ್ಪುಹಣದ ಪ್ರಭಾವ ಹೆಚ್ಚಾಗಿದೆ. ನಗದು ವಹಿವಾಟು ದೊಡ್ಡ ಪ್ರಮಾಣದಲ್ಲಿ ನಡೆಯುವುದರಿಂದ ಕಪ್ಪುಹಣಕ್ಕೆ ಕುಮ್ಮಕ್ಕು ದೊರಕಿದೆ. ಇದನ್ನು ತಪ್ಪಿಸಲು ನೋಟು ನಿಷೇಧ ಅನಿವಾರ್ಯವಾಗಿತ್ತು' ಎನ್ನುವುದು ಸರ್ಕಾರದ ವಾದ. ಈ ಹಿನ್ನೆಲೆಯಲ್ಲೇ ಈಗ ಡಿಜಿಟಲ್ ವಹಿವಾಟುಗಳ ಬಗ್ಗೆ ಸರ್ಕಾರ ದೊಡ್ಡ ಧ್ವನಿಯಲ್ಲಿ ಮಾತನಾಡುತ್ತಿದೆ. ಜನರ ಎಲ್ಲ ವಹಿವಾಟುಗಳೂ ಬ್ಯಾಂಕ್‌ಗಳ ಮೂಲಕವೇ ಆಗಬೇಕು ಎನ್ನುವುದು ಸರ್ಕಾರ ಸೂಚಿಸುವ ಪರಿಹಾರ. ಹಾಗೆಂದೇ ಕಾರ್ಡ್ ವಹಿವಾಟು ಮುಂಚೂಣಿಗೆ ಬಂದಿದೆ.

ಈ ಎಲ್ಲ ಉಪಕ್ರಮಗಳಿಂದ ಗ್ರಾಹಕ ಮಾರುಕಟ್ಟೆಯಲ್ಲಿ ಬಹುದೊಡ್ಡ ಪರಿವರ್ತನೆ ತರುವ ಕೆಲಸ ಈ ವರ್ಷ ಆರಂಭವಾಗಿದೆ. ಡಿಜಿಟಲ್ ಪಾವತಿ ಮಾಡುವವರಿಗೆ ಮಾರುಕಟ್ಟೆಯಲ್ಲಿ ಡಿಸ್ಕೌಂಟ್‌ಗಳ ಮಹಾಪೂರ ಹರಿದಿದೆ. ಸರ್ಕಾರವೇ ಮುಂದೆ ನಿಂತು ಕೋಟಿ ರೂಪಾಯಿಗಳ ಲಾಟರಿ ಬಹುಮಾನ ಘೋಷಿಸಿದೆ. ವಾಹನಗಳ ಮಾರುಕಟ್ಟೆಯಲ್ಲಿ 'ಒಂದು ಪೈಸೆಯನ್ನೂ ನೀಡದೆ ಇಂದೇ ಖರೀದಿಸಿ, ಪಾವತಿ ಕಂತನ್ನು 2018ರಲ್ಲಿ ಆರಂಭಿಸಿ' ಎನ್ನುವ ಹೊಸ ರೀತಿಯ ಘೋಷಣೆಗಳು ಕೇಳಿಬಂದಿವೆ! ಈ ಡಿಜಿಟಲ್ ಕ್ರಾಂತಿಗೆ ಮೂಲಸೌಲಭ್ಯಗಳು ಸಾಕಷ್ಟು ಇವೆಯೆ ಎನ್ನುವುದು ಇನ್ನೂ ಖಚಿತವಾಗಿಲ್ಲ. ಹಾಗೆಯೇ ಬಲವಂತವಾಗಿ ಡಿಜಿಟಲ್ ವಹಿವಾಟಿಗೆ ಗ್ರಾಹಕರನ್ನು ತಳ್ಳುವುದು ಎಷ್ಟು ಸರಿ.. ಎನ್ನುವ ಪ್ರಶ್ನೆಗೂ ಉತ್ತರ ಸಿಕ್ಕಿಲ್ಲ.

### ಪದಕ ತಂದ ಸಂಭ್ರಮ

'ಇಡೀ ವರ್ಷ ಅತ್ಯಂತ ಹೆಚ್ಚು ಭಾರತೀಯರು ಗೂಗಲ್‌ನಲ್ಲಿ ಹುಡುಕಾಡಿದ್ದು ರಿಯೊ ಒಲಿಂಪಿಕ್ಸ್ ಸಾಧನೆಗಳು ಮತ್ತು ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು ಅವರ ಬಗ್ಗೆ' ಎನ್ನುವುದು ಕುತೂಹಲಕರ ಅಂಶ. ರಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ತಂಡದ ಒಟ್ಟು ಸಾಧನೆ ಬೇರೆ ದೇಶಗಳಿಗೆ ಹೋಲಿಸಿದರೆ ಹೇಳಿಕೊಳ್ಳುವಂಥದ್ದೇನೂ ಅಲ್ಲ. ಆದರೆ ಈ ಹಿಂದಿನ ನಮ್ಮದೇ ಸಾಧನೆಗಳಿಗೆ ಹೋಲಿಸಿದರೆ ನಮ್ಮ



ಜಮ್ಮು– ಕಾಶ್ಮೀರದ ಮುಖ್ಯಮಂತ್ರಿಯಾಗಿದ್ದ ಮುಫ್ತಿ ಮೊಹ್ಮದ್ ಸಯೀದ್ ನಿಧನ